**1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಚಾಮರಾಜನಗರ,**

**ಪೀಠಾಸೀನ ಕೊಳ್ಳೇಗಾಲ**

**ಎಸ್.ಸಿ. 5022 /2025**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | ವರ್ಷ ಬಿ.ವಿ | **ಪ್ರಮಾಣ ವಚನ ಭೋಧಿಸಿದ ದಿನಾಂಕ** |
| **ತಂದೆ ಹೆಸರು** | : | ವೆಂಕಟೇಶ್ | **17.06.2026** |
| **ವಯಸ್ಸು** | : | 29 ವರ್ಷ | |
| **ವೃತ್ತಿ** | : | ಪಿ ಎಸ್ ಐ, ಕೊಳ್ಳೇಗಾಲ ಪಟ್ಟಣ ಪೊ.ಠಾಣೆ | **ಪ್ರಾ.ಸಾಃ 21** |
| **ವಾಸ ಸ್ಥಳ** | : | ಕೊಳ್ಳೇಗಾಲ | **ಚಾ.ಸಾಃ 45** |

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-**

**ನಾನು ದಿಃ 12.08.2024 ರಿಂದ ಪಿ.ಎಸ್.ಐ ಆಗಿ ಕೊಳ್ಳೇಗಾಲ ಪಟ್ಟಣ ಪೊ.ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.**

ದಿಃ 04.03.2025 ರಂದು ಮಧ್ಯಾಹ್ನ 1.00 ಗಂಟೆ ಸಮಯದಲ್ಲಿ ನಾನು ಕರ್ತವ್ಯದಲ್ಲಿದ್ದಾಗ ಕೊಳ್ಳೇಗಾಲ ಪಟ್ಟಣದ ಚನ್ನಮ್ಮ ಲಾಡ್ಜ್ ನಲ್ಲಿ ಒಬ್ಬ ವ್ಯಕ್ತಿಗೆ ಚಾಕುವಿನಿಂದ ಇರಿಯಲಾಗಿದೆ ಎಂದು ಮಾಹಿತಿ ಬಂದಿದ್ದು, ಸ್ಥಳಕ್ಕೆ ಭೇಟಿ ನೀಡಿರುತ್ತೇನೆ. ಆ ಸಮಯಕ್ಕೆ ಸಿಬ್ಬಂದಿಯವರು ಗಾಯಾಳುವನ್ನು ಆಸ್ಪತ್ರೆಗೆ ದಾಖಲು ಮಾಡಿದ್ದರು. ಸ್ಥಳದಲ್ಲಿ ಸಿಬ್ಬಂದಿಯವರು ಭಾವಚಿತ್ರಗಳನ್ನು ತೆಗೆದಿದ್ದರು. ಭಾವಚಿತ್ರಗಳನ್ನು ನಿಪಿ 3 ರಿಂದ 6 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ನಂತರ ನಾನು ಆಸ್ಪತ್ರೆಗೆ ಭೇಟಿ ನೀಡಿರುತ್ತೇನೆ. ಅದೇ ದಿನ ಸಂಜೆ 5.30 ಗಂಟೆ ಸಮಯದಲ್ಲಿ

ಚಾಸಾ 1 ರವರು ಠಾಣೆಗೆ ಹಾಜರಾಗಿ ನೀಡಿದ ಲಿಖಿತ ಪಿರ್ಯಾದನ್ನು ಸ್ವೀಕರಿಸಿ ಠಾಣಾ ಮೊ.ನಂ. 43/2025 ರಲ್ಲಿ ಪ್ರಕರಣವನ್ನು ನೊಂದಾಯಿಸಿರುತ್ತೇನೆ. ಪಿರ್ಯಾದನ್ನು ನಿಪಿ 1 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 1(ಬಿ) ಎಂದು ಗುರುತಿಸಲಾಯಿತು. ಪ್ರ.ವ.ವರದಿಯನ್ನು ನಿಪಿ 50 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 50(ಎ) ಎಂದು ಗುರುತಿಸಲಾಯಿತು. ಅದೇ ದಿನ ಆರೋಪಿ ಪತ್ತೆಗಾಗಿ ಸಿಬ್ಬಂದಿಯವರಾದ ಚಾಸಾ 32 ಮತ್ತು 33 ರವರನ್ನು ನೇಮಿಸಿರುತ್ತೇನೆ. ಅದೇ ದಿನ ಸಂಜೆ 6.45ಕ್ಕೆ ಸಿಬ್ಬಂದಿಯವರು ಆರೋಪಿಯನ್ನು ವಶಕ್ಕೆ ಪಡೆದು ರಾತ್ರಿ 8.00 ಗಂಟೆ ಸಮಯಕ್ಕೆ ನನ್ನ ಮುಂದೆ ಹಾಜರುಪಡಿಸಿರುತ್ತಾರೆ. ನಾನು ಆರೋಪಿಯನ್ನು ವಿಚಾರಣೆ ಮಾಡಿ ರಾತ್ರಿ 8.45 ಗಂಟೆ ಸಮಯದಲ್ಲಿ ದಸ್ತಗಿರಿ ಕ್ರಮ ಜರುಗಿಸಿರುತ್ತೇನೆ. ಆರೋಪಿಯ ಸ್ವ-ಇಚ್ಛಾ ಹೇಳಿಕೆಯನ್ನು ದಾಖಲು ಮಾಡಿಕೊಂಡಿರುತ್ತೇನೆ. ಚಾಸಾ 32 ರವರು ವರದಿಯನ್ನು ನೀಡಿರುತ್ತಾರೆ. ವರದಿಯನ್ನು ನಿಪಿ 51 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 51(ಎ) ಎಂದು ಗುರುತಿಸಲಾಯಿತು. ಆರೋಪಿಯು ತನ್ನ ಸ್ವ-ಇಚ್ಛಾ ಹೇಳಿಕೆಯಲ್ಲಿ ಕೃತ್ಯಕ್ಕೆ ಬಳಸಿದ ಆಯುಧವನ್ನು ಮೇಲೆ ಹೇಳಿದ ಚನ್ನಮ್ಮ ಲಾಡ್ಜ್ ನ ಮಂಚದ ಕೆಳಗೆ ಇಟ್ಟಿರುವುದಾಗಿ ಮತ್ತು ಅದನ್ನು ತೋರಿಸುವುದಾಗಿ ಹೇಳಿರುತ್ತಾರೆ. ಆರೋಪಿಯ ಹೇಳಿಕೆಯ ಭಾಗವನ್ನು ನಿಪಿ 52 ಎಂದು ಗುರುತಿಸಲಾಯಿತು. ಆರೋಪಿಯು ನಮ್ಮನ್ನು ಚನ್ನಮ್ಮ ಲಾಡ್ಜ್ ನ ರೂಂ ನಂ. 7 ಕ್ಕೆ ಕರೆದುಕೊಂಡು ಹೋಗಿ ಪಂಚರಾದ ಚಾಸಾ 13 ಮತ್ತು 14 ರವರ ಸಮಕ್ಷಮ ರಾತ್ರಿ 8.45 ರಿಂದ 9.15 ಗಂಟೆ ಸಮಯದ ನಡುವೆ ಇದೇ ಚಾಕು ಎಂದು ಹೇಳಿ ಮಂಚದ ಕೆಳಗೆ ಇದ್ದ ಒಂದು ಚಾಕುವನ್ನು ತೆಗೆದು ನಮ್ಮ ಮುಂದೆ ಹಾಜರುಪಡಿಸಿದನು. ನಾನು ಚಾಕುವನ್ನು ಪರಿಶೀಲಿಸಲಾಗಿ ಅದು ರಕ್ತಸಿಕ್ತವಾಗಿತ್ತು. ಸದರಿ ಚಾಕು ಕೆಂಪು ಹಿಡಿ ಇದ್ದ ಸ್ಟೀಲ್ ಚಾಕು ಆಗಿತ್ತು. ಚಾಕುವಿನ ಎರಡು ಭಾಗಗಳಲ್ಲಿ ರಕ್ತದ ಕಲೆ ಇತ್ತು. ನಾನು ಸದರಿ ಚಾಕುವನ್ನು ಮಹಜರ್ ಮೂಲಕ ಪಂಚರ ಸಮಕ್ಷಮ ಅಮಾನತ್ತುಪಡಿಸಿ ಕೊಂಡಿರುತ್ತೇನೆ. ಮಹಜರ್ ಅನ್ನು ನಿಪಿ 12 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 12(ಸಿ) ಎಂದು ಗುರುತಿಸಲಾಯಿತು. ಮಹಜರ್ ಕ್ರಮಗಳನ್ನು ಸಿಬ್ಬಂದಿ ಮೂಲಕ ಭಾವಚಿತ್ರ ತೆಗೆಸಿ ವಿಡೀಯೋ ಚಿತ್ರೀಕರಣ ಮಾಡಿಸಿರುತ್ತೇನೆ. ಭಾವಚಿತ್ರಗಳನ್ನು ನಿಪಿ 13 ರಿಂದ 17 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಸಿಡಿಯನ್ನು ನಿಪಿ 43 ಎಂದು ಈಗಾಗಲೇ

ಗುರುತಿಸಲಾಗಿರುತ್ತದೆ. (ಈ ದಿನ ನಿಪಿ 43ರ ಸಿಡಿಯನ್ನು ನ್ಯಾಯಾಲಯದ ಕಂಪ್ಯೂಟರ್ ಮೂಲಕ ಚಾಲನೆ ಮಾಡಲು ಪ್ರಯತ್ನಿಸಿದ್ದು, ಯಾವುದೇ ದೃಶ್ಯಾವಳಿಗಳನ್ನು ಕಂಪ್ಯೂಟರ್ ನಲ್ಲಿ ಮೂಡಿರುವುದಿಲ್ಲ) ನಂತರ ವಶಪಡಿಸಿಕೊಂಡ ಚಾಕುವಿನ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ.

ದಿಃ 05.03.2025 ರಂದು ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 7.00 ರಿಂದ 7.45 ಗಂಟೆಯವರೆಗೆ ಪಂಚರಾದ ಚಾಸಾ 15 ಮತ್ತು 16 ರವರ ಸಮಕ್ಷಮ ಜರುಗಿಸಿರುತ್ತೇನೆ. ಕೃತ್ಯ ನಡೆದ ಸ್ಥಳವನ್ನು ಚಾಸಾ 4 ರವರು ತೋರಿಸಿರುತ್ತಾರೆ. ಆ ಸಮಯದಲ್ಲಿ ಒಂದು ಸಾದಾ ಗಾಜಿನ ಸ್ಲೈಡ್ ಅನ್ನು ಅಮಾನತ್ತುಪಡಿಸಿಕೊಂಡಿರುತ್ತೇನೆ. ಸ್ಥಳದಲ್ಲಿದ್ದ ರಕ್ತದ ಕಲೆಗಳನ್ನು ಶೇಖರಿಸಿರುತ್ತೇನೆ. ಮಹಜರ್ ಅನ್ನು ನಿಪಿ 7 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯ್ನು ನಿಪಿ 7 (ಡಿ) ಎಂದು ಗುರುತಿಸಲಾಯಿತು. ಗಾಜಿನ ಸ್ಲೈಡ್ ಗಳನ್ನು ಮು.ಮಾ 1 ಮತ್ತು 2 ಎಂದು ಈಗಾಗಲೇ ಗುರುತಿಸಲಾಗಿರುತ್ತದೆ. ಮು.ಮಾ 1 ಮತ್ತು 2 ರ ಸಂಬಂಧ ನ್ಯಾಯಾಲಯಕ್ಕೆ ಮಾಲುಪಟ್ಟಿಯನ್ನು ಸಲ್ಲಿಸಿರುತ್ತೇನೆ.

ದಿಃ 06.03.2025ರ ಮಧ್ಯರಾತ್ರಿ 2.30 ಗಂಟೆ ಸಮಯದಲ್ಲಿ ಈ ಪ್ರಕರಣದ ಗಾಯಾಳು ಮೃತಪಟ್ಟಿರುತ್ತಾನೆ. ಬೆಳಗ್ಗೆ 8.00 ಗಂಟೆಗೆ ಚಾಸಾ 1 ರವರು ದೂರನ್ನು ನೀಡಿರುತ್ತಾರೆ. ಸದರಿ ದೂರನ್ನು ದಾಖಲು ಮಾಡಿಕೊಂಡಿರುತ್ತೇನೆ ಮತ್ತು ನ್ಯಾಯಾಲಯಕ್ಕೆ ಮಾಹಿತಿ ನೀಡಿರುತ್ತೇನೆ. ದೂರನ್ನು ನಿಪಿ 2 ಎಂದು ಈಗಾಗಲೇ ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ 2(ಬಿ) ಎಂದು ಗುರುತಿಸಲಾಯಿತು. ಮುಂದಿನ ತನಿಖೆಯನ್ನು ಚಾಸಾ 46 ರವರು ವಹಿಸಿಕೊಂಡಿರುತ್ತಾರೆ. ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ. ನ್ಯಾಯಾಲಯಕ್ಕೆ ಸಲ್ಲಿಸಿದ ನಿವೇದನೆಯನ್ನು ನಿಪಿ 53 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ 53(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ- ಶ್ರೀ ಸಿ.ಆರ್. ವಕೀಲರಿಂದ**

ನನಗೆ ಮಾಹಿತಿ ಬಂದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ತನಿಖೆಯ ವಿವರಗಳನ್ನು ತನಿಖಾ ದಿನಚರಿಯಲ್ಲಿ ನಮೂದು ಮಾಡಿರುತ್ತೇನೆ. ನನಗೆ ಮಾಹಿತಿ ಬಂದಾಗ ಚಾಸಾ 35 ಮತ್ತು 36 ರವರು ಠಾಣೆಯಲ್ಲಿದ್ದರು. ಚನ್ನಮ್ಮ ಲಾಡ್ಜ್ ಠಾಣೆಯಿಂದ ಸುಮಾರು 300 ಮೀಟರ್ ಅಂತರದಲ್ಲಿರುತ್ತದೆ. ನಾನು ಮೊದಲು ಭೇಟಿ ನೀಡಿದಾಗ ಲಾಡ್ಜ್ ನ ಬೇರೆ ಕೊಠಡಿಗಳಲ್ಲಿ ಯಾರು ಯಾರು ಇದ್ದರು ಎಂದು ವಿಚಾರಣೆ ಮಾಡಲಿಲ್ಲ, ತಕ್ಷಣ ಆಸ್ಪತ್ರೆಗೆ ಹೋಗಿರುತ್ತೇನೆ. ಆ ಸಮಯದಲ್ಲಿ ಚಾಸಾ 1 ರವರು ಸ್ಥಳದಲ್ಲಿದ್ದರು. ಆ ಸಮಯದಲ್ಲಿ ಚಾಸಾ 1 ರವರ ಹೇಳಿಕೆಯನ್ನು ಮಾಡಿಕೊಳ್ಳಲಿಲ್ಲ. ನಾನು ಮೊದಲ ಬಾರಿಗೆ ಕೊಠಡಿಗೆ ಭೇಟಿ ನೀಡಿದ ಸಮಯದಲ್ಲಿ ಕೊಠಡಿಯಲ್ಲಿ ರಕ್ತದ ಕಲೆಗಳಿದ್ದವು. ನಾನು ಈ ವಿಚಾರವನ್ನು ಕೇಸಿನ ದಿನಚರಿಯಲ್ಲಿ ನಮೂದಿಸಿರುತ್ತೇನೆ. ಸಿಬ್ಬಂದಿಯಜವರು ನಿಪಿ 3 ರಿಂದ 6ರ ಭಾವಚಿತ್ರಗಳನ್ನು ಯಾವ ಮೊಬೈಲ್ ನಿಂದ ತೆಗೆದಿದ್ದಾರೆ ಎಂದು ನಾನು ವಿಚಾರಿಸಿರುವುದಿಲ್ಲ. ಸದರಿ ಮೊಬೈಲ್ ನ ಮೆಮೋರಿ ಕಾರ್ಡ್ ಅನ್ನು ನಾನು ಪರಿಶೀಲಿಸಲಿಲ್ಲ. ಆರೋಪಿಯನ್ನು ದಸ್ತಗಿರಿ ಮಾಡಿದ ಸಮಯದಲ್ಲಿ ಸರ್ವೋಚ್ಚ ನ್ಯಾಯಾಲಯದ 12 ನಿರ್ದೇಶನಗಳನ್ನು ನಾನು ಪಾಲಿಸಿರುತ್ತೇನೆ. ಆರೋಪಿ ಠಾಣೆಯಲ್ಲಿ ತನ್ನ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿರುತ್ತೇನೆ. ಸ್ವ-ಇಚ್ಛಾ ಹೇಳಿಕೆಯನ್ನು ನೀಡುವ ಸಮಯದಲ್ಲಿ ನಾನು ಚಿತ್ರೀಕರಣ ಮಾಡಿಸಿರುವುದಿಲ್ಲ. ನಾನು 2 ಬಾರಿ ಚನ್ನಮ್ಮ ಲಾಡ್ಜ್ ಗೆ ಭೇಟಿ ನೀಡಿದಾಗ ಸದರಿ ಲಾಡ್ಜ್ ನ ಮುಂಭಾಗದ ಭಾವಚಿತ್ರಗಳನ್ನು ತೆಗೆದಿರುತ್ತೇನೆ. ನಾನು ಸದರಿ ಲಾಡ್ಜ್ ನ ರಿಜಿಸ್ಟರ್ ಅನ್ನು ಪರಿಶೀಲಿಸಿರುತ್ತೇನೆ. ನಾನು ಮೊದಲ ಬಾರಿಗೆ ಕೊಠಡಿಯನ್ನು ಪರಿಶೀಲನೆ ಮಾಡಿದಾಗ ನನಗೆ ಯಾವುದೇ ಕುರುಹುಗಳು ದೊರೆಯಲಿಲ್ಲ. ನಾನು ಮಹಜರ್ ಸಾಕ್ಷಿದಾರರಿಗೆ ಲಿಖಿತ ನೋಟಿಸ್ ನೀಡಿರುತ್ತೇನೆ. ನಿಪಿ 7 ರಲ್ಲಿ ಸಮಯದ ಭಾಗದಲ್ಲಿ ತಿದ್ದಿರುತ್ತದೆ. ಕೈ ತಪ್ಪಿನಿಂದಾದ ಬರವಣಿಗೆಯನ್ನು ತಿದ್ದಲಾಗಿದೆ ಎಂದು ಸಾಕ್ಷಿ ಹೇಳಿರುತ್ತಾರೆ. ತಿದ್ದಿರುವ ಭಾಗದಲ್ಲಿ ಷರಾ ಇರುವುದಿಲ್ಲ.

ನಿಪಿ 1 ಚಾಸಾ 1 ರವರ ಬರವಣಿಗೆ ಇರುತ್ತದೆ. ನಿಪಿ 2 ಬೆರಳಚ್ಚು ಮಾಡಿದ ದಾಖಲಾತಿ ಆಗಿರುತ್ತದೆ. ನಾನು ತನಿಖೆಯ ವಿವರಗಳನ್ನು ರಿಮ್ಯಾಂಡ್ ಅರ್ಜಿಯಲ್ಲಿ ನಮೂದು ಮಾಡಿರುತ್ತೇನೆ. ಮು.ಮಾ 3 ಸೃಷ್ಟಿ ಮಾಡಿದ ಹೊಸ ಚಾಕು ಎಂದರೆ ಸರಿಯಲ್ಲ. ಚಾಕು ಮೇಲಿದ್ದ ರಕ್ತದ ಕಲೆಗಳ ವಿವರಗಳನ್ನು ಮಹಜರ್ ನಲ್ಲಿ ಬರೆದಿರುವುದಿಲ್ಲ. ನಾನು ಸ್ಥಳಕ್ಕೆ ಸಿಬ್ಬಂದಿಗಳನ್ನು ನಿಯೋಜಿಸಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಯಾವುದೇ ಸ್ಥಳ ತೋರಿಸಿಲ್ಲ, ಸದರಿ ಸ್ಥಳದಲ್ಲಿ ಯಾವುದೇ ಮಹಜರ್ ಬರೆದಿಲ್ಲ ಎಂದರೆ ಸರಿಯಲ್ಲ. ನಾನು ಚಾಕುವನ್ನು ಅಮಾನತ್ತುಪಡಿಸಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ರಕ್ತವನ್ನು ಗಾಜಿನ ಸ್ಲೈಡ್ ಮೂಲಕ ಸಂಗ್ರಹಿಸಿಲ್ಲ ಎಂದರೆ ಸರಿಯಲ್ಲ. ಆರೋಪಿಯು ನನ್ನ ಮುಂದೆ ಸ್ವ-ಇಚ್ಛಾ ಹೇಳಿಕೆಯನ್ನು ನೀಡಿಲ್ಲ ಎಂದರೆ ಸರಿಯಲ್ಲ. ಭಾವಚಿತ್ರಗಳನ್ನು ಈ ಪ್ರಕರಣಕ್ಕೆಂದು ಸೃಷ್ಟಿ ಮಾಡಲಾಗಿದೆ ಎಂದರೆ ಸರಿಯಲ್ಲ. ಆರೋಪಿಗೂ ಮತ್ತು ಮೃತನ ಸಾವಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಾಮರಾಜನಗರ, ಪೀಠಾಸೀನ ಕೊಳ್ಳೇಗಾಲ